ಅಕ್ಕಿ ದಪ್ಪ	:	2-00	5-10	3-10
ಗೋಧಿ	:	1-25	3-45	2-20

ಉ) ಭಾರತ ಸರ್ಕಾರವು ಆಹಾರ ಧಾನ್ಯಗಳ ಹಂಚಿಕೆ ಬೆಲೆಯನ್ನು ಆಗಿಂದಾಗ್ಗೆ ಹೆಚ್ಚಿಗೆ ಮಾಡುತ್ತಿರುವುದರಿಂದ.

ಋ) ರಾಜ್ಯ ಸರ್ಕಾರವು ಈ ವರ್ಷ 70 ಕೋಟಿ ಸಬ್ಸಿಡಿ ಹಣವನ್ನು ಈ ಯೋಜನೆಯಡಿ ಪೂರೈಸಲಾಗಿದೆ. ಭಾರತ ಸರ್ಕಾರದವರು ಬೆಲೆ ಹೆಚ್ಚು ಮಾಡಿದ್ದರೂ ಸಹ ರಾಜ್ಯ ಸರ್ಕಾರವು ಕೊಡುತ್ತಿದ್ದ ಸಬ್ಸಿಡಿ ಕಡಿಮೆ ಮಾಡಿರುವುದಿಲ್ಲ. ಈಗ ಆರಂಭದಲ್ಲಿದ್ದ ಬೆಲೆಗೆ ಹಸಿರು ಪಡಿತರ ಚೀಟಿದಾರರಿಗೆ ಪಡಿತರ ವಸ್ತುಗಳನ್ನು ಒದಗಿಸುವುದು ಸಾಧ್ಯವಾಗಲಾರದು.

ರಾಜ್ಯ ಸರ್ಕಾರವು ಸಿ.ಬಿ.ಐ.ಗೆ. ವಹಿಸಿರುವ ಪ್ರಕರಣಗಳ ಸಂಖ್ಯೆ.

343-ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಳೆದ 2 ವರ್ಷಗಳಲ್ಲಿ ರಾಜ್ಯ ಸರ್ಕಾರವು ಯಾವ ಯಾವ ಪ್ರಕರಣಗಳನ್ನು ತನಿಖೆ ನಡೆಸುವ ಸಲುವಾಗಿ ಸಿಬಿಐ (ಕೇಂದ್ರ ತನಿಖಾದಳ)ಗೆ ವಹಿಸಿಕೊಟ್ಟಿದೆ: (ಪ್ರತಿಯೊಂದು ಪ್ರಕರಣದ ಬಗ್ಗೆ ವಿವರಗಳನ್ನು ನೀಡುವುದು)*

ಮಂಜೂರು ಮಾಡುವ ಬಗ್ಗೆ 2,500-00 ರೂ.ಗಳ.

ಆ) *ಅವುಗಳ ಪೈಕಿ ಎಷ್ಟು ಪ್ರಕರಣಗಳ ತನಿಖೆಯನ್ನು ಸಿಬಿಐ ಈಗಾಗಲೇ ಮುಕ್ತಾಯ ಗೊಳಿಸಿದೆ ಹಾಗೂ ತನಿಖೆ ಮುಗಿದ ಪ್ರಕರಣಗಳ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೆ :*

ಇ) *ಆ ವರದಿಯ ಆಧಾರದ ಮೇಲೆ ರಾಜ್ಯ ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ:*

ಈ) *ರಾಜ್ಯದ ಸಿಒಡಿ ಸಂಸ್ಥೆಯು ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಸಿಒಡಿಯನ್ನು ಬಿಟ್ಟು ಸಿಬಿಐಗೆ ಪ್ರಕರಣಗಳನ್ನು ನೀಡುವುದರಿಂದ ಜನತೆಗೆ ಸಿಒಡಿಯ ಮೇಲೆ ಶಂಕೆ ಉಂಟಾಗುವುದಿಲ್ಲವೇ?*

ಉ) *ಇನ್ನು ಮುಂದೆ ರಾಜ್ಯ ಸರ್ಕಾರವು ಎಲ್ಲ ಪ್ರಕರಣಗಳನ್ನು ಸಿಒಡಿಗೆ ಮಾತ್ರವೇ ವಹಿಸಿಕೊಡುವ ಬಗ್ಗೆ ತೀರ್ಮಾನ ಕೈಗೊಳ್ಳುವುದೇ?*

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಸ್ವರ್ಣ ಫೈನಾನ್ಸ್ ಕಂಪನಿಯಲ್ಲಿ ನಡೆದ ಅವ್ಯವಹಾರಗಳ ಬಗ್ಗೆ ಕಬ್ಬನಪಾರ್ಕ್ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 27 :89, 305:89, ಮತ್ತು 366:89 ಭಾ.ದಂ.ಸಂಹಿತೆ ಕಲಂ 420ರ ಪ್ರಕಾರ ದಾಖಲಾದ ಪ್ರಕರಣಗಳನ್ನು ದಿನಾಂಕ 7-4-92 ರಂದು ಸಿಬಿಐ ತನಿಖೆಗೆ ವಹಿಸಲಾಗಿದೆ.

2. ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಬದನವಾಳು ಗ್ರಾಮದಲ್ಲಿ ಲಿಂಗಾಯುತ ಮತ್ತು ಪರಿಶಿಷ್ಟ ಜಾತಿಯವರ ನಡುವೆ ನಡೆದ ಘರ್ಷಣೆಗೆ ಸಂಬಂಧ ಪಟ್ಟಂತೆ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 59:93 ಮತ್ತು 52:93ರ ಭಾ.ದಂ.ಸಂ. ಕಲಂ 143, 144, 147, 148, 324, 341,302 ಮತ್ತು 3(...) ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ದೌರ್ಜನ್ಯ ನಿಷೇಧ ಕಾಯಿದೆ 1989ರ ಪ್ರಕಾರ ಮೊಕದ್ದಮೆ ದಾಖಲು ಮಾಡಿಕೊಂಡು ಪ್ರಕರಣವನ್ನು ದಿನಾಂಕ 11-5-93 ರಂದು ಸಿಬಿಐ ತನಿಖೆಗೆ

3. ರಾಯಚೂರು ನಗರ ಸದರ ಬಜಾರ್ ಪೊಲೀಸ್ ಠಾಣೆ ವ್ಯಾಪ್ತಿಯ ಸಿಂಡಿಕೇಟ್ ಬ್ಯಾಂಕ್ನ ಅವ್ಯವಹಾರದ ಬಗ್ಗೆ ಸದರ ಬಜಾರ್ ಪೊಲೀಸ್ ಠಾಣೆ ಅಪರಾಧ ಸಂಖ್ಯೆ :367:91 ರ ಭಾ.ದಂ.ಸಂ.ಕಲಂ 409, 468ರ ಪ್ರಕಾರ ಮೊಕದ್ದಮೆ ದಾಖಲು ಮಾಡಿಕೊಂಡು ಪ್ರಕರಣವನ್ನು ದಿನಾಂಕ 30-7-93ರಂದು ಸಿಬಿಐಗೆ ತನಿಖೆಗೆ ವಹಿಸಲಾಗಿದೆ.

4. ಬೆಂಗಳೂರು ದೂರದರ್ಶನ ಎಕ್ಸಿಕ್ಯೂಟಿವ್ ಡೈರೆಕ್ಟರ್ ಶ್ರೀಮತಿ ಕಮಲಾ ಹೆಮ್ಮಿಗೆರವರ ಪ್ರೆಸ್ ಫೋಟೊ ಗ್ರಾಫರ್ರವರಿಂದ 10 ಸಾವಿರ ರೂ. ಲಂಚ ಪಡೆದ ಬಗ್ಗೆ ಸಿಕ್ಕಿಬಿದ್ದು ಈ ಸಂಬಂಧ ಜೆ.ಸಿ.ನಗರ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ : 55:93 ಕಲಂ 7ರ ಪಿಸಿ ಕಾಯಿದೆ ಪ್ರಕಾರ ಮೊಕದ್ದಮೆ ನೊಂದಾಯಿಸಿ ದಿನಾಂಕ 13-4-92 ರಂದು ಸಿಬಿಐ ತನಿಖೆಗೆ ವಹಿಸಲಾಗಿದೆ.

5. ದಿನಾಂಕ 27-2-92 ರಂದು ಕೆ.ವಿ. ಹನುಮಂತಯ್ಯ, ಅಂಚೆ ಕಛೇರಿ ಉಪವಿಭಾಗದ ಇನ್ಸ್ಪೆಕ್ಟರ್ರವರ ಮೇಲೆ ಅಕ್ರಮ ಸಂಭಾವನೆ ತಡೆ ನಿಯಮಾವಳಿ 1988ರ ಪ್ರಕಾರ ಕೆ.ಜಿ.ಎಫ್. ಪೊಲೀಸ್ ಠಾಣೆ ಅಪರಾಧ ಸಂಖ್ಯೆ : 66:92ರಲ್ಲಿ ಪ್ರಕರಣ ದಾಖಲ್ಮಾಡಿಕೊಂಡು ಹೆಚ್ಚಿನ ತನಿಖೆಗಾಗಿ ದಿನಾಂಕ 5-8-92ರಂದು ಸಿಬಿಐಗೆ ವರ್ಗಾಯಿಸಲಾಗಿದೆ.

6

6. ದಿನಾಂಕ 30-8-90 ರಂದು ಶ್ರೀ ಕೆ.ಬಿ. ಬಲ್ಲೂ ಲಾಯ, ಕಂಟ್ರೋಲರ್ಆಫ್ ಫೈನಾನ್ಸ್ ಎಲೆಕ್ಟ್ರಾನಿಕ್ ರೀಸರ್ಚ್ ಲಿಮಿಟೆಡ್ ಇವರು ಕಬ್ಬನ್ ಪಾರ್ಕ್ ಪೊಲೀಸರಿಗೆ ದೂರು ಸಲ್ಲಿಸಿ, ತಮ್ಮ ವಿಭಾಗದ ಪರ್ಚೇಸ್ ಆಫೀಸರ್ ಶ್ರೀ ಎ.ಡಬ್ಲ್ಯೂ ಅಕ್ರಂರವರು ಕಸ್ಟಂ ಇಲಾಖೆಗೆ ಕಟ್ಟಬೇಕಾಗಿದ್ದ 6,64,135 ರೂ.ಗಳನ್ನು ವಂಚಿಸಿರುವುದಾಗಿ ನೀಡಿದ ದೂರಿನನ್ವಯ ಕಬ್ಬನ್ಪಾರ್ಕ್ ಪೊಲೀಸ್ ಠಾಣೆ ಅಪರಾಧ ಸಂಖ್ಯೆ: 267:90 ಕಲಂ 408-464-420 ಭಾ.ದಂ.ಸಂ.ಪ್ರಕಾರ ಪ್ರಕರಣ ದಾಖಲು ಮಾಡಿಕೊಂಡು ದಿನಾಂಕ 30-7-93 ರಂದು ಹೆಚ್ಚಿನ ತನಿಖೆಗಾಗಿ ಸಿಬಿಐಗೆ ವರ್ಗಾಯಿಸಲಾಗಿದೆ.

7. ಜೆ. ಅಲೆಗ್ಯಾಂಡರ್, ಐ.ಎ.ಎಸ್.ರವರು ಹಿಂದಿನ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಹಣಕಾಸು ಆಯುಕ್ತರು ಆಗಿದ್ದ ಸಮಯದಲ್ಲಿ ಮೆ:ಕ್ಲಾಸಿಕ್ ಕಂಪ್ಯೂಟರ್ ಸಿಸ್ಟಮ್ಸ್ರವರಿಂದ 92ರ ಮಾರ್ಚಿ ತಿಂಗಳಿನಲ್ಲಿ 100 ಆಪಲ್ ಮೆಷಂತೋಷ್ ಕಂಪ್ಯೂಟರ್ಗಳನ್ನು ಕೊಳ್ಳಲು ಒಟ್ಟು ಬೆಲೆಬಾಳುವ 5.27 ಕೋಟಿ ರೂ.ಗಳ ಪೈಕಿ 1.58 ಕೋಟಿಯನ್ನು ಮುಂಗಡವಾಗಿ ಶ್ರೀ ವಿ. ಗೋಕುಲ್ ಕೃಷ್ಣರವರಿಗೆ, ಯಾವುದೇ ನಿಯಮಗಳನ್ನು ಅನುಸರಿಸದೇ ಹಣ ಬಿಡುಗಡೆ ಮಾಡಿದ್ದಕ್ಕಾಗಿ ಈ ಪ್ರಕರಣವನ್ನು ಕೇಂದ್ರ ತನಿಖಾ ದಳಕ್ಕೆ ದಿನಾಂಕ : 31-3-93 ರಂದು ಮುಂದಿನ ತನಿಖೆಗಾಗಿ ವಹಿಸಲಾಗಿದೆ.

8. ದಿನಾಂಕ 9-4-92 ರಂದು ಶ್ರೀ ವೆಂಕಟೇಶ್ ಇವರು ಜಯನಗರ ಪೊಲೀಸರಿಗೆ ದೂರು ಸಲ್ಲಿಸಿ ಸಿಂಡಿಕೇಟ್ ಬ್ಯಾಂಕ್ ಮೇನೇಜರ್ರವರು 3 ಲಕ್ಷ ರೂ.ಗಳ ಸಾಲ ಮಂಜೂರು ಮಾಡುವ ಬಗ್ಗೆ 2500/- ರೂ.ಗಳ ಲಂಚ ಕೇಳುತ್ತಿರುವರೆಂದು ನೀಡಿದ ದೂರಿನ ಮೇರೆಗೆ ಜಯನಗರ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ : 206:92 ಕಲಂ 7 ಸಿ.ಸಿ. ಕಾಯ್ದೆ ಪ್ರಕಾರ ಮೊಕದ್ದಮೆ ದಾಖಲು ಮಾಡಿಕೊಂಡು, ನಂತರ ಮುಂದಿನ ತನಿಖೆಗಾಗಿ [illegible] ವರ್ಗಾಯಿಸಲಾಗಿದೆ.

9. ದಿನಾಂಕ 6-3-93 ರಂದು ಶ್ರೀ ಎಂ.ಎಸ್. ಮೂರ್ತಿ, ಸಹಾಯಕ ಅಧೀಕ್ಷಕರು, ಆರ್‌ಎಂಎಸ್, ಬೆಂಗಳೂರುರವರು ಹೈಗ್ರೌಂಡ್ಸ್ ಪೊಲೀಸ್ ಠಾಣೆಗೆ ಹಾಜರಾಗಿ ದಿನಾಂಕ 3-9-93 ರಂದು ಮುಂಬೈನಿಂದ ಬೆಂಗಳೂರಿಗೆ ತಾವು ವಿಮೆ ಮಾಡಿ ಕಳುಹಿಸಿದ ಸುಮಾರು 900ರೂ. ಬೆಲೆ ಬಾಳುವ ವಸ್ತು ಕಾಣೆಯಾಗಿರುವುದಾಗಿ ಸಲ್ಲಿಸಿದ ದೂರಿನ ಮೇರೆಗೆ ಹೈಗ್ರೌಂಡ್ಸ್ ಪೊಲೀಸ್ ಠಾಣೆ ಅಪರಾಧ ಸಂಖ್ಯೆ: 115:93 ಕಲಂ 381 ಭಾ.ದಂ.ಸಂ. ಪ್ರಕಾರ ಮೊಕದ್ದಮೆ ದಾಖಲು ಮಾಡಿಕೊಂಡು ಹೆಚ್ಚಿನ ತನಿಖೆಗೆ ದಿನಾಂಕ 28-7-93 ರಂದು ಸಿಬಿಐಗೆ ವರ್ಗಾಯಿಸಲಾಗಿದೆ.

ಆ) ಮಾಹಿತಿ ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಆಡಳಿತ ಪರಂಪರೆಯ ಹಿತದೃಷ್ಟಿಯಿಂದ ಅಂತರ ರಾಜ್ಯಗಳಿಗೆ ಸಂಬಂಧಿಸಿದ ಪ್ರಕರಣಗಳನ್ನೂ ಅಲ್ಲದೆ ಸಾಮಾನ್ಯವಾಗಿ ವಿಶೇಷ ಮಹತ್ವದ ಪ್ರಕರಣಗಳನ್ನು ಸಿಬಿಐ ತನಿಖೆಗೆ ವಹಿಸಲಾಗಿದೆ. ಸಿಒಡಿ ಕಾರ್ಯ ನಿರ್ವಹಣೆ ಬಗ್ಗೆ ಸಾರ್ವಜನಿಕರಲ್ಲಿ ಅಪನಂಬಿಕೆ ಉಂಟಾಗುತ್ತದೆ ಎಂಬುದನ್ನು ರಾಜ್ಯ ಸರ್ಕಾರವು ಒಪ್ಪುವುದಿಲ್ಲ.

ಉ) - ಇಲ್ಲ -

ರಾಜ್ಯದಲ್ಲಿ ಮಹಿಳಾ ಪೋಲೀಸ್ ಠಾಣೆಗಳ ಪ್ರಾರಂಭ.

342 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರತಿ ಜಿಲ್ಲೆಗೊಂದರಂತೆ ಮಹಿಳಾ ಪೋಲೀಸ್ ಠಾಣೆಗಳನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಅದರ ಪ್ರಾರಂಭಿಕ ಹಂತವಾಗಿ ಎಲ್ಲೆಲ್ಲಿ ಮಹಿಳಾ ಪೋಲೀಸ್ ಠಾಣೆಗಳನ್ನು ಪ್ರಾರಂಭಿಸಲಾಗಿದೆ?

ಇ) ಅದಕ್ಕಾಗಿ ಆಯವ್ಯಯದಲ್ಲಿ ಎಷ್ಟು ಹಣವನ್ನು ಮೀಸಲಿಡಲಾಗುವುದು?

ಈ) ಮಹಿಳೆಯರಿಗೆ ಹೆಚ್ಚಿನ ರಕ್ಷಣೆ ನೀಡುವ ಸಲುವಾಗಿ ಅದಷ್ಟು ಬೇಗ ಜಿಲ್ಲೆಗೊಂದರಂತೆ ಮಹಿಳಾ ಪೋಲೀಸ್ ಠಾಣೆಗಳನ್ನು ಪ್ರಾರಂಭಿಸಲಾಗುವುದೇ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು.) :

ಅ) ಹೌದು.

ಆ) ಬೆಂಗಳೂರು ನಗರ, ಮೈಸೂರು, ಹುಬ್ಬಳ್ಳಿ ಧಾರವಾಡ ಮತ್ತು ಮಂಗಳೂರಿನಲ್ಲಿ ಒಂದೊಂದು ಮಹಿಳಾ ಪೋಲೀಸ್ ಠಾಣೆ ಪ್ರಾರಂಭವಾಗಲಿದೆ.

ಇ) ಮೇಲ್ಕಂಡ ಠಾಣೆಗಳ ನಿರ್ವಹಣೆಗೆ ಬೇಕಾಗುವಷ್ಟು ಹಣವನ್ನು ಮೀಸಲಿಡಲಾಗುವುದು.

ಈ) ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಗಡಿ ಪ್ರದೇಶದಲ್ಲಿ ಕನ್ನಡದ ಅಭಿವೃದ್ಧಿ.

340 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ಕನ್ನಡ ಜಾಗೃತಿ ವರ್ಷವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ರಾಜ್ಯ ಗಡಿ ಭಾಗಗಳಲ್ಲಿ ಕನ್ನಡದ ಪರಿಸ್ಥಿತಿಯ ಬಗ್ಗೆ ಚಿಂತನೆ ನಡೆಸಲು ಕೈಗೊಂಡ ಕ್ರಮಗಳೇನು?